O.S.No.:337/2016
P.W.:1

ಈ ದಿನ ದಿಃ05.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ನಿಶಾನೆ ಪಿ-11 ರಿಂದ 18ಕ್ಕೆ ಸಂಬಂಧಿಸಿದಂತೆ ಪಾಟೀ ಸವಾಲುಃ-**

**ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಎಲ್.ಎ ರವರಿಂದಃ-**

**1.** ನಿಪಿ-11 ರಿಂದ ನಿಪಿ-18ರಂತೆ ಇರುವ ದಾಖಲೆಗಳು ಕುರುಪೇಟೆ ಗ್ರಾಮಕ್ಕೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ಪ್ರತಿವಾದಿಯರು ಕೋಡಿಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ನಿಪಿ-11ರಲ್ಲಿ ನನ್ನ ತಂದೆಯ ಹೆಸರು ತಮ್ಮಣ್ಣಯ್ಯ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ-12 ರಿಂದ ನಿಪಿ-18ರಲ್ಲಿ ನಮ್ಮ ತಂದೆಯ ಹೆಸರು ತಮ್ಮಯ್ಯಣ್ಣ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿ 1ನೇ ಪ್ರತಿವಾದಿಯ ಹೆಸರನ್ನು ತಮ್ಮಯ್ಯ ಎಂದು ಬರೆಸಿರುತ್ತೇನೆ ಎಂದರೆ ಸರಿ. ನಿಪಿ-11 ರಿಂದ ನಿಪಿ-18ರಲ್ಲಿ ನಮೂದಾಗಿರುವ ತಮ್ಮಯ್ಯಣ್ಣನೇ ಬೇರೆ, 1ನೇ ಪ್ರತಿವಾದಿಯೇ ಬೇರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೂ ನಮಗೂ ಯಾವುದೇ ಸಂಬಂಧ ಇಲ್ಲದೆ ಇದ್ದರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಅವುಗಳ ಆಧಾರದ ಮೇಲೆ ಈ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

2. 1ನೇ ಪ್ರತಿವಾದಿಗೂ ರಾಮಚಂದ್ರಮ್ಮ ರವರಿಗೂ ಯಾವುದೇ ಸಂಬಂಧ ಇಲ್ಲ

ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಹೆಸರು ಮತ್ತು ನಿಪಿ-11 ರಿಂದ ನಿಪಿ-18ರಲ್ಲಿರುವ ತಮ್ಮಯ್ಯಣ್ಣ ಎಂಬ ವ್ಯಕ್ತಿಯ ಹೆಸರು ಹೊಲಿಕೆ ಇರುವ ಕಾರಣಕ್ಕೆ ಅದರ ದುರುಪಯೋಗಪಡಿಸಿಕೊಂಡು 1ನೇ ಪ್ರತಿವಾದಿಯ ವಿರುದ್ದ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೂ 1ನೇ ಪ್ರತಿವಾದಿಗೂ ಯಾವುದೇ ಸಂಬಂಧ ಇಲ್ಲದೆ ಇದ್ದರು 1ನೇ ಪ್ರತಿವಾದಿಗೆ ಸೇರಿದ ಆಸ್ತಿಗಳನ್ನು ಲಪಟಾಯಿಸುವ ದುರುದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**